**ಪ್ರಭು ಮೈ ಗುಲಾಮ್ ಗುಲಾಮ್ ಗುಲಾಮ್ ತೇರಾ, ತೂ ದೇವನ್ ತೂ ದೇವನ್ ತೂ ದೇವನ್ ಮೇರಾ ।**
**ದೋ ರೋಟಿ ಏಕ ಲಂಗೋಟಿ ತೇರೇ ಪಾಸ್ ಮೈ ಪಾಯಾ, ಭಕ್ತಿ ಭಾವ ದೇ ಔರ್ ನಾಮ್ ತೇರಾ ಗಾಯಾ ॥**

"ಪ್ರಭು ನಾನು ನಿನ್ನ ಗುಲಾಮ. ನೀನೇ ನನ್ನ ದೇವರು, ಎರಡು ರೊಟ್ಟಿ, ಒಂದು ಲಂಗೋಟಿಯನ್ನು ನಿನ್ನಿಂದ ಗಳಿಸಿಕೊಂಡೆ. ನಿನ್ನೀ ನಾಮಸ್ಮರಣೆ ಮಾಡಲು ನನಗೆ ಭಕ್ತಿಭಾವನೆಗಳನ್ನು ಕೊಡು" – ಕವಿಯ ಹೃದಯದಿಂದ ಹೊರಸೂಸುವ ಭಕ್ತಿಯ ಕಂಪು ಈ ಪದ್ಯದಲ್ಲಿದೆ.

ಕಬೀರರು ಹಿಂದಿಯ ಶ್ರೇಷ್ಠ ದಾರ್ಶನಿಕರು, ಭಕ್ತರು, ಅನುಭಾವಿಗಳು, ಸಮಾಜಸುಧಾರಕರು ಮತ್ತು ಕವಿ ಹೃದಯವುಳ್ಳವರು. ಇವರು ಜ್ಞಾನಿಯೂ ಹೌದು, ಭಕ್ತರೂ ಹೌದು. ಕಬೀರರ ದೃಷ್ಟಿಯಲ್ಲಿ ಜ್ಞಾನ ಭಕ್ತಿಯ ಪೋಷಕ; ಭಕ್ತಿ ಜ್ಞಾನಕ್ಕಿಂತಲೂ ಮಿಗಿಲು. ಇವರದು ಆತ್ಮಾನುಭವದ ಪ್ರಕಾಶದಲ್ಲಿ ಮುನ್ನಡೆಯುವ ಸ್ವಚ್ಛಂದ ಪ್ರವೃತ್ತಿ.

## ಕ್ರಾಂತಿಕಾರಿ ಕವಿ

ಜನರು ಕಲ್ಲು ಮಂದಿರವನ್ನು ಕಟ್ಟಿ ಅಲ್ಲಿ ದೇವರಿದ್ದಾನೆ ಎಂಬ ಭ್ರಮೆಯಲ್ಲಿ ಇರುತ್ತಾರೆ. ಅಂಥವರಿಗೆ, "ದೇವರು ದೇವಸ್ಥಾನದಲ್ಲಿಲ್ಲ; ಆತ ನಮ್ಮ ಹೃದಯದಲ್ಲೇ ಇದ್ದಾನೆ" ಎಂಬ ಸತ್ಯದ ಅರಿವನ್ನು ಮೂಡಿಸಲು ಕಬೀರರು ಹೀಗೆ ಪ್ರಯತ್ನಿಸುತ್ತಾರೆ: **ಕಸ್ತೂರಿ ಕುಂಡಲಿ ಬಸೈ ಮೃಗ್ ಢೊಂಢೈ ವನಮಾಹಿ । ಐಸೇ ಘಟಘಟ ರಾಮ ಹೈ ದುನಿಯಾ ದೇಖೆ ನಾಹಿ॥** –"ಕಸ್ತೂರಿ ಮೃಗವು ತನ್ನ ನಾಭಿಯಲ್ಲೇ ಕಸ್ತೂರಿಯನ್ನಿಟ್ಟುಕೊಂಡು ಅದರ ಸುಗಂಧವನ್ನು ಹುಡುಕಿಕೊಂಡು ಕಾಡನ್ನೆಲ್ಲಾ ಅಲೆದಾಡುವಂತೆ, ಜನರು ತಮ್ಮ ಹೃದಯದಲ್ಲೇ ಇರುವ ಆ ಪರಮಾತ್ಮನನ್ನು ಕಾಣುವುದಿಲ್ಲ."

ಸಾವಿರಾರು ಪಾಪಗಳಿಂದ ತನ್ನನ್ನು ಅಪವಿತ್ರಗೊಳಿಸಿಕೊಂಡು, ತೀರ್ಥಯಾತ್ರೆ, ಪುಣ್ಯಕ್ಷೇತ್ರಗಳ ದರ್ಶನದಿಂದ ತಾವು ಪರಿಶುದ್ಧರೆಂದು ಭಾವಿಸುವುದನ್ನು ಕಬೀರರು ಖಂಡಿಸುತ್ತಾರೆ. **ಮಾಲಾ ತೇ ಕರಮೇ ಫಿರೈ ಜೀಬ್‌ಫಿರೈ ಮನಮಾಹಿ ಮನವಾಂತೋ ದಸ್‌ದಿಸ್ ಫಿರೈ ಯಹು ತೋಸುಮಿರನ ನಾಹಿ** – "ಕೈಯಲ್ಲಿ ಮಣಿಗಳನ್ನು ಎಣಿಸುತ್ತ, ನಾಲಿಗೆ ಮಂತ್ರಗಳನ್ನು ಗುಣಿಗುಣಿಸುತ್ತಿದ್ದು, ಮನಸ್ಸು ಹತ್ತು ಹಲವು ಕಡೆ ಸುತ್ತಾಡುತ್ತಿದ್ದರೆ ಅದು ನಾಮಸ್ಮರಣೆಯಲ್ಲ" ಎಂದು ಎಚ್ಚರಿಸುತ್ತಾರೆ.. **ಮನ್ ಮಥುರಾ ದಿಲ್ ದ್ವಾರಕಾ, ಕಾಯಾಕಾಸಿ ಜಾಣೀ ದಸ್‌ವಾಂಸ್ದಾರ್ ದೇಹುರಾ ತಾಮೈ ಜ್ಯೋತಿ ಪಛಾಣೀ** – "ಮನಸ್ಸೇ ಮಥುರಾ, ಹೃದಯವೇ ಕಾಶಿ, ಈ ದೇಹದಲ್ಲಿ ಪರಂಜ್ಯೋತಿಯಿದೆ" ಎನ್ನುತ್ತಾರೆ. ಕೇವಲ ವಿಗ್ರಹಗಳಲ್ಲಿ ದೇವರನ್ನು ಕಾಣುವ ಪ್ರವೃತ್ತಿಯನ್ನು ಖಂಡಿಸುತ್ತ, **ಪತ್ತರ ಪೂಜೈ ಹರಿ ಮಿಲೈತೊ ಮೈ ಪೂಜೂಂ ಪಹಾರ್, ತಾತೆ ಯಹ್ ಚಾಕಿ ಭಲೀ ಪೀಸೇ ಖಾಯ್ ಸಂಸಾರ್** – "ಕಲ್ಲು ದೇವರನ್ನು ಪೂಜಿಸುವುದರಿಂದ ಭಗವಂತ ದೊರೆಯುವಂತಿದ್ದರೆ, ನಾನು ಬೆಟ್ಟವನ್ನೇ ಪೂಜಿಸುತ್ತೇನೆ. ಅದಕ್ಕಿಂತ ಬೀಸುವ ಕಲ್ಲನ್ನಾದರೂ ಪೂಜಿಸಿದರೆ ಅದು ಹಿಟ್ಟನ್ನಾದರೂ ಕೊಡುತ್ತದೆ" ಎಂದು ಕಟಕಿಯಾಡುತ್ತಾರೆ.

ಕಬೀರರು ಬೇರೆಯವರ ದೋಷಗಳನ್ನು ಕಾಣುವ ಹೀನ ಪ್ರವೃತ್ತಿಯನ್ನು ಹೀಗೆ ಟೀಕಿಸುತ್ತಾರೆ: **ಬುರಾ ಜೋ ದೇಖನೆ ಮೈ ಗಯಾ ಬುರಾನ ಮಿಲಾ ಕೋಯ್ ಜಬ್ ದಿಲ್ ಢೂಂಡಾ ಅಪನಾ ಮುಝುಸೇ ಬುರಾ ನ ಕೋಯ್** – "ಕೆಟ್ಟವರನ್ನು ಹುಡುಕಿಕೊಂಡು ಹೊರಟ ನನಗೆ ಕೆಟ್ಟವರಾರೂ ಸಿಗಲಿಲ್ಲ. ನನ್ನನ್ನು ನಾನೇ ನೋಡಿಕೊಂಡಾಗ ನನಗಿಂತಲೂ ಕೆಟ್ಟವನಾದ ಇನ್ನೊಬ್ಬನನ್ನು ನಾನು ಕಾಣಲಿಲ್ಲ." ಕಬೀರರು ತಮ್ಮ ಕಾಲದಲ್ಲಿದ್ದ ಜಾತಿ ವ್ಯವಸ್ಥೆಯನ್ನು ಕುರಿತು ಕಟುವಾಗಿಯೇ ಹೇಳಿದ್ದಾರೆ: **ಜಾತಿ ನ ಪೂಛೋ ಸಾಧು ಕೀ ಪೂಛ್ ಲೀಜೀಯೇ ಜ್ಞಾನ್, ಮೋಲ್ ಕರೋ ತಲವಾರ್ ಕಾ ಪಡಾ ರಹನೆ ದೋ ಮ್ಯಾನ್** – "ಸಂತರ ಜಾತಿಯನ್ನು ಕೇಳದೆ ಅವರ ಜ್ಞಾನವನ್ನು ತಿಳಿ. ಕತ್ತಿಯನ್ನು ಉಪಯೋಗಿಸು. ಆದರೆ ಅದರ ಒರೆಯಿಂದೇನು ಪ್ರಯೋಜನ" ಎನ್ನುತ್ತಾರೆ.

ಭಾರತೀಯ ಭಕ್ತಿಪಂಥದ ಇತಿಹಾಸದಲ್ಲಿ ಕಬೀರರಂತಹ ಕೆಚ್ಚೆದೆಯ, ದಿಟ್ಟ ಹೋರಾಟಗಾರರು ಅಪರೂಪ. ಭಾರತೀಯ ಸಾಹಿತ್ಯ ಕಂಡ ಅಪರೂಪದ ಕ್ರಾಂತಿಚೇತನ ಇವರು. ಇವರ ಬದುಕು ಸತ್ಯಶೋಧಕರಿಗೆ ಮತ್ತು ಸಾಧಕರಿಗೆ ದೀಪಸ್ತಂಭದ ಹಾಗಿದೆ. ಇಂದಿಗೂ ಅದು ಭಕ್ತರ, ಸಾಧಕರ ಬದುಕಿಗೆ ದಾರಿದೀಪವಾಗಿದೆ. •

# ಸಂತ ತಂದೆ - ಭಕ್ತೆ ಮಗಳು

ಕಲ್ಯಾಣಿ ವೆಂಕಟರಾಮನ್



ತಮಿಳುನಾಡಿನ ವೈಷ್ಣವ ಸಂಪ್ರದಾಯದ ಆಳ್ವಾರರು ಭಕ್ತಿ ಆಂದೋಲನದ ಪ್ರವರ್ತಕರೆಂದೇ ಹೆಸರಾಗಿದ್ದಾರೆ. ಅದರಲ್ಲೂ, 'ಹಿರಿಯ ಆಳ್ವಾರ್' ಎಂದು ಅನ್ವರ್ಥ ನಾಮವನ್ನು ಪಡೆದುಕೊಂಡ, ವಿಷ್ಣುಚಿತ್ತರು ಮತ್ತು ಅವರ ಸುಪುತ್ರಿ ಗೋದಾದೇವಿಯ ಚರಿತ್ರೆಗಳು ಅತ್ಯಂತ ಮನೋಜ್ಞವಾದುವು. ಅವರಿಬ್ಬರ ಕಥೆಯನ್ನು ಸೊಗಸಾಗಿ ನಿರೂಪಿಸಿರುವ ಲೇಖಕಿ ಕನ್ನಡ ಮತ್ತು ತಮಿಳು ಭಾಷೆಗಳೆರಡರಲ್ಲೂ ನಿಷ್ಣಾತರು; ಚೆನ್ನೈ ಶ್ರೀರಾಮಕೃಷ್ಣ ಮಠದ ಭಕ್ತರು.

**ಭ**ಕ್ತಿಮಾರ್ಗದಲ್ಲಿ ತಮಿಳುನಾಡಿನ ಆಳ್ವಾರರ ಸಂಪ್ರದಾಯವೇ ಅತ್ಯಂತ ಪ್ರಾಚೀನವಾದುದು. ಆಳ್ವಾರರು ಒಟ್ಟು ಹನ್ನೆರಡು ಮಂದಿ. ಇವರು ಶ್ರೀವೈಷ್ಣವ ಪರಂಪರೆಗೆ ಸೇರಿದವರು; ಭಾಗವತ ಮತದ ಅನುಯಾಯಿಗಳು. ಇವರ ಮತಕ್ಕೆ ಪಾಂಚರಾತ್ರ ಮತ, ಏಕಾಂತಿಕ ಮತ ಎಂಬ ಹೆಸರುಗಳೂ ಇವೆ.

ಆಳ್ವಾರರು ಬೇರೆ ಬೇರೆ ಜಾತಿ–ಕುಲಗಳಲ್ಲಿ ಜನಿಸಿದವರು. 'ಆಳ್ವಾರ್' ಎಂದರೆ 'ಭಕ್ತಿಸಾಗರದಲ್ಲಿ ಮುಳುಗಿದವರು' ಎಂಬ ಸಾಮಾನ್ಯ ಅರ್ಥ ಇದೆ. ಆದರೆ, 'ಆಳ್ವಾರ್' ಎಂಬ ಪದಕ್ಕೆ 'ಮಹಿಳೆ' ಎಂಬ ವಿಶೇಷವಾದ ಅರ್ಥವೂ ಇದೆ. ಅದರ ಪ್ರಕಾರ, ಪರಮಾತ್ಮನಾದ ಶ್ರೀವಿಷ್ಣು ಒಬ್ಬನೇ ಪುರುಷನು. ಉಳಿದವರೆಲ್ಲರೂ ಸ್ತ್ರೀಯರು. 'ದಿವ್ಯಸೂರಿಚರಿತಂ', 'ಪ್ರಪನ್ನಾಮೃತಂ' ಎಂಬ ಸಂಸ್ಕೃತ ಗ್ರಂಥಗಳು ಮತ್ತು 'ಗುರುಪರಂಪರಾಪ್ರಭಾವ', 'ಮಣಿಪ್ರವಾಳ' (ಸಂಸ್ಕೃತ ಮತ್ತು ತಮಿಳು ಮಿಶ್ರವಾದ ಶೈಲಿ) ಎಂಬುವು ಆಳ್ವಾರರ ಚರಿತ್ರೆಯನ್ನು ಅರಿಯಲು ಇರುವ ಆಧಾರ ಗ್ರಂಥಗಳು.

ಆಳ್ವಾರರು ರಚಿಸಿರುವ ಸ್ತೋತ್ರಗಳೇ 'ಪಾಶುರ'ಗಳು. ಪಾಶುರಂ ಎಂದರೆ 'ಕೊಳಲಿನ ಇಂಪಾದ ನಾದ' ಎಂದರ್ಥ. ಈ ಪಾಶುರಗಳನ್ನು ಸಂಗ್ರಹಿಸಿದ ಗ್ರಂಥಕ್ಕೆ 'ನಾಲಾಯಿರ (ನಾಲ್ಕು ಸಾವಿರ) ದಿವ್ಯಪ್ರಬಂಧಮ್' ಎಂದು ಹೇಳುತ್ತಾರೆ.

ಇವರಲ್ಲಿ ಒಬ್ಬರು ಪೆರಿಯಾಳ್ವಾರ್. ಅವರು ಪವಿತ್ರ ಕ್ಷೇತ್ರವಾದ ಶ್ರೀವಿಲ್ಲಿಪುತ್ತೂರಿನಲ್ಲಿ ಜನಿಸಿದರು. ಅವರ ತಂದೆ ಶ್ರೀಮುಕುಂದ ಭಟ್ಟರು; ತಾಯಿ ಪದ್ಮವಲ್ಲಿ. ಅವರ ಕಾಲ ಸುಮಾರು ಕ್ರಿ.ಶ. ಒಂಬತ್ತನೆಯ ಶತಮಾನ.

ತಂದೆತಾಯಿಗಳು ಮಗುವಿಗೆ 'ವಿಷ್ಣುಚಿತ್ತ' ಎಂದು ಹೆಸರಿಟ್ಟರು; ಸಂಸ್ಕಾರಗಳೆಲ್ಲವನ್ನೂ ನೆರವೇರಿಸಿ, ವೇದಾಧ್ಯಯನವನ್ನು ಮಾಡಿಸಿದರು. ತಕ್ಕ ಪ್ರಾಯದಲ್ಲಿ ವಿವಾಹವೂ ಆಯಿತು. ಲೌಕಿಕ ವಿಷಯಗಳಲ್ಲಿ ಅವರಿಗೆ ಆಸಕ್ತಿ ಇರಲಿಲ್ಲ. ಶ್ರೀವಿಲ್ಲಿಪುತ್ತೂರಿನಲ್ಲಿ ವಟಪತ್ರಶಯನನಾಗಿ ಕಂಗೊಳಿಸುತ್ತಿರುವ ಶ್ರೀಕೃಷ್ಣನಿಗೆ ಪುಷ್ಪ ಕೈಂಕರ್ಯ ಮಾಡಬೇಕೆಂದು ನಿಶ್ಚಯಿಸಿದರು; ಅದಕ್ಕಾಗಿ ಹೂತೋಟವನ್ನು ಮಾಡಿದರು. ದಿನನಿತ್ಯವೂ ಹೂವುಗಳನ್ನು ಸಂಗ್ರಹಿಸಿ ಅರ್ಚಿಸುತ್ತಿದ್ದರು. ಬಾಲಗೋಪಾಲನ ಲೀಲೆಗಳನ್ನು ಸದಾ ಹಾಡುತ್ತಿದ್ದರು.

ಆ ಕಾಲದಲ್ಲಿ ಪಾಂಡ್ಯರಾಜ್ಯವನ್ನು ವಲ್ಲಭದೇವನ್ ಎಂಬ ಅರಸನು ಆಳುತ್ತಿದ್ದನು. ಒಂದು ದಿನ ರಾತ್ರಿ ಅವನು ನಗರಸಂಚಾರ ಮಾಡಿಕೊಂಡು ಬರುತ್ತಿದ್ದನು. ಆಗ ಒಂದು ಮನೆಯ ಜಗಲಿಯಲ್ಲಿ ಬ್ರಾಹ್ಮಣರೊಬ್ಬರು ಮಲಗಿದ್ದನ್ನು ಕಂಡು, ಎಬ್ಬಿಸಿ ವಿಚಾರಿಸಿದನು. ಅದಕ್ಕೆ ಅವರು, "ನಾನು ತೀರ್ಥಯಾತ್ರೆಯನ್ನು ಮಾಡುತ್ತಿರುವೆ. ಗಂಗೆಯಲ್ಲಿ ತೀರ್ಥಸ್ನಾನ ಮಾಡಿ, ಸೇತುಸ್ನಾನಕ್ಕೆ ಹೋಗುತ್ತಿದ್ದೇನೆ. ರಾತ್ರಿ ಇಲ್ಲಿ ಉಳಿದುಕೊಂಡು ಮುಂಜಾವಿನಲ್ಲಿ ಪ್ರಯಾಣವನ್ನು ಮುಂದುವರಿಸುತ್ತೇನೆ" ಎಂದು ಹೇಳಿದರು. ಒಂದು ಒಳ್ಳೆಯ ಶ್ಲೋಕವನ್ನು ಹೇಳಬೇಕೆಂದು ಅರಸನು ಅವರನ್ನು ವಿನಂತಿಸಿದನು. ಆ ಬ್ರಾಹ್ಮಣರು ಹೇಳಿದ ಶ್ಲೋಕದ

ಅರ್ಥ ಹೀಗಿತ್ತು: "ಮಳೆಗಾಲದಲ್ಲಿ ಸುಖವಾಗಿ ಇರುವುದಕ್ಕೆ ಉಳಿದ ಎಂಟು ತಿಂಗಳು ಪ್ರಯತ್ನಿಸಬೇಕು. ರಾತ್ರಿಯಲ್ಲಿ ಸೌಖ್ಯವಾಗಿ ಇರುವುದಕ್ಕೆ ಹಗಲಿನಲ್ಲಿ ದುಡಿಯಬೇಕು. ಮುಪ್ಪಿನಲ್ಲಿ ಶ್ರಮವಿಲ್ಲದೇ ಬಾಳುವುದಕ್ಕೆ ಯೌವನದಲ್ಲಿ ಪ್ರಯತ್ನಿಸಬೇಕು. ಮುಂದಿನ ಜನ್ಮದಲ್ಲಿ ಸುಖವಾಗಿ ಇರುವುದಕ್ಕೆ ಈ ಜನ್ಮದಲ್ಲಿ ಪ್ರಯತ್ನಿಸಬೇಕು." ಅರಸನು ಅವರನ್ನು ಮೆಚ್ಚಿ ಗೌರವಿಸಿದನು.

ಮರುದಿನ ಅರಸನು ತನ್ನ ಪುರೋಹಿತರಾದ ಸೆಲ್ವನಂಬಿ ಎಂಬ ಪಂಡಿತರೊಡನೆ ಇದನ್ನು ಕುರಿತು ಚರ್ಚಿಸಿದನು. ಮೋಕ್ಷಮಾರ್ಗವನ್ನು ಅರಿಯುವ ಮೊದಲು, ಪರಮಾತ್ಮ ಯಾರು ಎಂದು ನಿರ್ಣಯಿಸಬೇಕೆಂದು ಆದೇಶಿಸಿದನು. ಅದಕ್ಕಾಗಿ ಆಸ್ಥಾನದಲ್ಲಿ ವಾಕ್ಯಾರ್ಥವನ್ನು ಏರ್ಪಡಿಸಲಾಯಿತು. ವಿಷ್ಣುಚಿತ್ತರ ಕನಸಿನಲ್ಲಿ ಶ್ರೀಮಹಾವಿಷ್ಣು ದರ್ಶನ ನೀಡಿ, ಆ ಚರ್ಚೆಯಲ್ಲಿ ಭಾಗವಹಿಸಬೇಕೆಂದು ಆಜ್ಞಾಪಿಸಿದನು. ವಿಷ್ಣುಚಿತ್ತರು ಅದರಲ್ಲಿ ಪಾಲ್ಗೊಂಡು ಜಯಶಾಲಿಯಾದರು. ಶ್ರೀಮನ್ನಾರಾಯಣನೇ ಪರಬ್ರಹ್ಮ ಎಂದು ಸಾಧಿಸಿ ತೋರಿಸಿದರು. ಪಾಂಡ್ಯರಾಜನು, ಇವರ ಪ್ರೌಢಿಮೆಯನ್ನು ಮೆಚ್ಚಿ, 'ಪಟ್ಟರ್ ಪಿರಾನ್' ಎಂಬ ಬಿರುದಿನೊಂದಿಗೆ, ಚಿನ್ನದ ನಾಣ್ಯಗಳನ್ನು ನೀಡಿ ಗೌರವಿಸಿದನು.

ಅದಲ್ಲದೆ, ಅರಸನು ವಿಷ್ಣುಚಿತ್ತರನ್ನು ತನ್ನ ಪಟ್ಟದ ಆನೆಯ ಮೇಲೆ ಕುಳ್ಳಿರಿಸಿ, ಮೆರವಣಿಗೆ ಮಾಡಿಸಿದನು. ಆಗ, ಲಕ್ಷ್ಮೀಸಮೇತ ಶ್ರೀಮನ್ನಾರಾಯಣನು ಅವರಿಗೆ ದರ್ಶನ ನೀಡಿದನು. ಆ ಸೌಂದರ್ಯ–ಲಾವಣ್ಯ ಸ್ವರೂಪವನ್ನು ಕಂಡು, ಯಾವ ರೀತಿಯ ದೃಷ್ಟಿಯೂ ತಾಗದಿರಲಿ ಎಂದು, ಶ್ರೀಸ್ವಾಮಿಗೆ ಕ್ಷೇಮವನ್ನು ಕೋರುವ ಮಂಗಲಾಶಾಸನ ಪದ್ಯಗಳಾದ 'ತಿರುಪ್ಪಲ್ಲಾಂಡು' ಪಾಶುರವನ್ನು ವಿಷ್ಣುಚಿತ್ತರು ಭಕ್ತಿಪರವಶರಾಗಿ ಹಾಡಿದರು. ವೈಷ್ಣವ ದೇವಾಲಯಗಳಲ್ಲಿ ಹಾಡುವ ಪಾಶುರಗಳಲ್ಲಿ ಇದು ಬಹಳ ಪ್ರಸಿದ್ಧವಾದುದು. ಅವುಗಳಲ್ಲಿ ಒಂದು ಹೀಗಿದೆ:

**"ಹಲಹಲವು ವರ್ಷಗಳಲ್ಲಿ, ಹಲವು ಸಾವಿರ ವರ್ಷಗಳಲ್ಲಿ, ಹಲವು ಲಕ್ಷ ಕೋಟಿ ವರ್ಷಗಳಲ್ಲಿ, ಮಲ್ಲರನು ಗೆಲಿದ ಒಲುಮೆಯ ಭುಜಬಲಿ ಮಣಿವರ್ಣಾ, ನಿನ್ನ ಕೆಂಪಾದ ಪಾದಾರವಿಂದದ ಚೆಲುವಿಗೆ ರಕ್ಷೆಯಿರಲಿ"** *(ತಿರುಪ್ಪಲ್ಲಾಂಡು ೧)*

ಅಂದಿನಿಂದ ವಿಷ್ಣುಚಿತ್ತರು 'ಪೆರಿಯಾಳ್ವಾರ್' (ಹಿರಿಯ ಆಳ್ವಾರ್) ಎಂದು ಪ್ರಸಿದ್ಧರಾದರು. ಅವರಿಗೆ ದೊರಕಿದ ಧನದಿಂದ ಶ್ರೀವಿಲ್ಲಿಪುತ್ತೂರಿನಲ್ಲಿ ನಾನಾ ರೀತಿಯ ಸತ್ಕಾರ್ಯಗಳನ್ನು ಮಾಡಿದರು.

ಪೆರಿಯಾಳ್ವಾರ್ ಒಟ್ಟು ೪೭೩ ಪಾಶುರಗಳನ್ನು ರಚಿಸಿದ್ದಾರೆ. ಅವುಗಳಿಗೆ ಮೂರು ಶ್ರೀವೈಷ್ಣವ ವಿದ್ವಾಂಸರು ವ್ಯಾಖ್ಯಾನ ಬರೆದಿದ್ದಾರೆ. ಪೆರಿಯಾಳ್ವಾರರು ತಮ್ಮ ೮೫ನೆಯ ವಯಸ್ಸಿನಲ್ಲಿ ತಿರುಮಾಲಿಂಚೋಲೈಯಲ್ಲಿ ಪರಮಪದವನ್ನು ಹೊಂದಿದರು.

ಪೆರಿಯಾಳ್ವಾರರ ಪ್ರಸಿದ್ಧವಾದ ಕೆಲವು ಪಾಶುರಗಳನ್ನು ಸವಿಯೋಣ. ಅವರು ತಮ್ಮ ಪಾಶುರಗಳಲ್ಲಿ ಶ್ರೀಕೃಷ್ಣನನ್ನು ಮಗುವಾಗಿ ಭಾವಿಸಿ ಅವನ ಲೀಲೆಗಳನ್ನು ವಿವರಿಸಿದ್ದಾರೆ. ಭಕ್ತಿಭಾವ ತುಂಬಿ ತುಳುಕುವ ರೀತಿಯಲ್ಲಿ, ವಿವಿಧ ಭಾವನೆಗಳನ್ನು ವರ್ಣಿಸಿದ್ದಾರೆ. ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ ಹಾಡುವ ಜೋಗುಳ ಪಾಶುರದಲ್ಲಿ ಯಶೋದೆಯ ಮಾತೃವಾತ್ಸಲ್ಯ ಹೀಗೆ ಒಡಮೂಡುತ್ತದೆ:

**ಮಾಣಿಕ್ಯವನು ಕಟ್ಟಿ ಮಧ್ಯಮಧ್ಯದಲಿ ವಜ್ರವನು ಕಟ್ಟಿ**
**ಪುತ್ಥಳಿ ಚಿನ್ನದ ಸೊಬಗಿನ ಕಿರು ತೊಟ್ಟಿಲನ್ನು**
**ಆಶಿಸಿ ಬ್ರಹ್ಮನು ನಿನಗೆ ಕಳುಹಿಸಿದನು.**
**ಮಾಣಿ ಕಿರುಗೂಸೆ, ಜೋ ಜೋ ಜೋ**
**ಲೋಕವನ್ನು ಅಳೆದವನೆ ಜೋ ಜೋ ಜೋ** *(ಮಾಣಿಕ್ಕಂ ಕಟ್ಟಿ ೧)*

ದನಕರುಗಳನ್ನು ಮೇಯಿಸಲು ಕೃಷ್ಣನನ್ನು ಬರಿಕಾಲಿನಲ್ಲಿ ಯಶೋದೆ ಕಾಡಿಗೆ ಕಳುಹಿಸುತ್ತಾಳೆ. ನಂತರ ಅದಕ್ಕೆ ಪರಿತಪಿಸುವುದನ್ನು ವಿವರಿಸುವ ಪಾಶುರ ನಮ್ಮ ಮನವನ್ನು ಕರಗಿಸುತ್ತದೆ.

**ಕೊಡೆ ಮೆಟ್ಟುಗಳನ್ನೀಯದೆ ದಾಮೋದರನನು**
**ಒರಟು ಕಲ್ಲು ಹರಳು ನೆರೆದ ಕಡುಕಾಡಿನೊಳು**
**ಪಾದಗಳು ನೋಯೆ ಮಂದೆಯ ಹಿಂದೆ ನನ್ನ ಮಗುವ**
**ಕಳುಹಿಸಿದೆನಲ್ಲ! ಅಯ್ಯೋ! ಪಾಪವೇ!** *(ಅಂಜನವಣ್ಣನ್ನೈ, ೯)*


ತಿರುವೆಂಕಟನಾಥನ ಮೇಲೆ ಅವರಿಗೆ ಇದ್ದ ಭಕ್ತಿಯನ್ನು ಪೆರಿಯಾಳ್ವಾರರು ಹೀಗೆ ವ್ಯಕ್ತಪಡಿಸುತ್ತಾರೆ:

**ಶ್ರೇಷ್ಠ ತಣ್ಣನೆಯ ತಿರುವೆಂಕಟನಾಥನೇ**
**ವಿಶ್ವವನ್ನು ರಕ್ಷಿಸುವ ನಿಪುಣಾ, ದಾಮೋದರಾ,**
**ನನ್ನ, ನನ್ನೊಡವೆಯ ನಿನ್ನ ಚಕ್ರಾಯುಧ ಮುದ್ರೆಯನ್ನೊತ್ತಿ,**
**ಅನುಗ್ರಹವ ಬೇಡುತಲಿಹೆನು ನಿನ್ನ ಮನಸ್ಸು ಹೇಗೋ?**
*(ಚೆನ್ನಿಯೋಂಗು, ೧)*

ಇದಲ್ಲದೆ, 'ಪಿಳ್ಳೈತ್ತಮಿಳ್' ಎನ್ನುವ ಸಾಹಿತ್ಯಪ್ರಕಾರದಲ್ಲಿ ಕೃಷ್ಣನ ಬಾಲ್ಯ ಲೀಲೆಗಳನ್ನು ಸುಮಾರು ಇನ್ನೂರು ಪಾಶುರಗಳಲ್ಲಿ ಪೆರಿಯಾಳ್ವಾರರು ಅತ್ಯಂತ ಸುಂದರವಾಗಿ ನಿರೂಪಿಸಿದ್ದಾರೆ.

## ಶ್ರೀಆಂಡಾಳ್

ವಿದೇಹ ದೇಶದ ಮಿಥಿಲಾನಗರದಲ್ಲಿ ಭೂಮಿಯನ್ನು ಉಳುವಾಗ, ಶ್ರೀದೇವಿಯ ಅಂಶವಾದ ಸೀತಾದೇವಿಯನ್ನು ಜನಕ ಮಹಾರಾಜನು ಕಂಡನೆಂಬ ಕಥೆ ಇದೆ. ಹಾಗೆಯೇ ಶ್ರೀವಿಲ್ಲಿಪುತ್ತೂರಿನಲ್ಲಿ, ತಮ್ಮ ಉದ್ಯಾನವನದಲ್ಲಿ, ತುಳಸಿಯ ಪಾತಿಯಲ್ಲಿ ಪೆರಿಯಾಳ್ವಾರ್ ಒಂದು ಅಪರೂಪದ ಹೆಣ್ಣುಮಗುವನ್ನು ಕಂಡರು. ಪರಮಾನಂದದಿಂದ 'ಗೋದಾ' ಎಂದು ಹೆಸರಿಟ್ಟು ಪ್ರೀತಿಯಿಂದ ಬೆಳೆಸಿದರು. ಅವಳಿಗೆ ಪಂಚಸಂಸ್ಕಾರಗಳನ್ನು ಮಾಡಿದರು. ಅವರು ಸದಾ ಪರಬ್ರಹ್ಮನಾದ ಶ್ರೀಮಹಾವಿಷ್ಣುವಿನ ಅತಿಶಯವಾದ ಲಾವಣ್ಯವನ್ನು ನಾನಾ ರೀತಿಯಲ್ಲಿ ವರ್ಣಿಸಿ ಹಾಡುತ್ತಿದ್ದುದು ಬಾಲಕಿ ಗೋದಾದೇವಿಯ ಮನಸ್ಸಿನಲ್ಲಿ



ದಿನ ಪೆರಿಯಾಳ್ವಾರರ ಕನಸಿನಲ್ಲಿ ಶ್ರೀಮಹಾವಿಷ್ಣು ದರ್ಶನ ನೀಡಿದನು. “ನನಗೆ ಏಕೆ ಪುಷ್ಪ ಮಾಲೆಯನ್ನು ಇಂದು ಅರ್ಪಿಸಲಿಲ್ಲ?” ಎಂದು ಕೇಳಿದನು. ಪೆರಿಯಾಳ್ವಾರ್ ವಿಷಯವನ್ನು ತಿಳಿಸಿದಾಗ ಶ್ರೀಮಹಾವಿಷ್ಣು, “ಅವಳು ಮುಡಿದ ಪುಷ್ಪಮಾಲೆಗಳನ್ನೇ ನನಗೆ ಅರ್ಪಿಸಬೇಕು, ನನಗೆ ಪ್ರಿಯವಾಗುವುದು ಆ ಮಾಲೆಗಳೇ” ಎಂದು ಹೇಳಿದನು.

ಹೀಗೆಯೇ ದಿನಗಳು ಉರುಳಿದವು. ಒಂದು ದಿನ ಪರಮಾತ್ಮನು ಪೆರಿಯಾಳ್ವಾರರ ಕನಸಿನಲ್ಲಿ, “ನಿಮ್ಮ ಮಗಳನ್ನು ಶ್ರೀರಂಗದ ದೇವಸ್ಥಾನಕ್ಕೆ ಕರೆದುಕೊಂಡು ಬನ್ನಿ. ನಾನು ಅವಳನ್ನು ಸ್ವೀಕರಿಸುತ್ತೇನೆ” ಎಂದು ಆದೇಶವಿತ್ತನು. ಹಾಗೆಯೇ ಶ್ರೀರಂಗದ ದೇವಸ್ಥಾನದ ಪರಿವಾರ ದವರ ಕನಸಿನಲ್ಲಿ, “ನೀವು ಛತ್ರ, ಚಾಮರ ವಾದ್ಯಗಳ ಸಮೇತ ಶ್ರೀವಿಲ್ಲಿಪುತ್ತೂರಿಗೆ ಹೋಗಿ, ಪೆರಿಯಾಳ್ವಾರರನ್ನು ಮತ್ತು ಅವರ ಮಗಳನ್ನು ಕರೆದುಕೊಂಡು ಬನ್ನಿ” ಎಂದು ಆಜ್ಞಾಪಿಸಿದನು. ಪಾಂಡ್ಯರಾಜನಾದ ಶ್ರೀವಲ್ಲಭದೇವನಿಗೂ ಕನಸಿನಲ್ಲಿ ದರ್ಶನ ಕೊಟ್ಟು, “ನೀನು ನಿನ್ನ ಪರಿವಾರದೊಡನೆ ಶ್ರೀವಿಲ್ಲಿಪುತ್ತೂರಿಗೆ ಹೋಗು. ಗೋದೆಯನ್ನು ಮುತ್ತಿನ ಪಲ್ಲಕ್ಕಿಯಲ್ಲಿ ಶ್ರೀರಂಗಕ್ಕೆ ಕರೆದುಕೊಂಡು ಬಾ” ಎಂದು ನುಡಿದನು.

ಗಾಢವಾದ ಭಕ್ತಿಯನ್ನು ಉಂಟುಮಾಡಿತು. ಅವಳು ತನ್ನ ತಂದೆ ದಿನನಿತ್ಯವೂ ಮಾಡುತ್ತಿದ್ದ ದೈವಕೈಂಕರ್ಯದಲ್ಲಿ ಭಾಗಿಯಾದಳು; ತಂದೆಯನ್ನೇ ಗುರುವಾಗಿ ಅಂಗೀಕರಿಸಿದಳು. ಮಧುರಭಾವದ ಭಕ್ತಿಯಲ್ಲಿ ತಲ್ಲೀನಳಾದಳು. ಶಿವಶರಣೆಯರಾದ ಕಾರೈಕ್ಕಾಲ್ ಅಮ್ಮೈಯಾರ್ ಮತ್ತು ಅಕ್ಕಮಹಾದೇವಿಯರಂತೆ, ವೈಷ್ಣವಭಕ್ತೆ ಯಾದ ಮೀರಾ ಮತ್ತು ಹೆಳವನಕಟ್ಟೆ ಗಿರಿಯಮ್ಮಳಂತೆ ಗೋದಾದೇವಿ ಶ್ರೀರಂಗನಾಥನ ಮೇಲಿನ ಅನುರಕ್ತಿಯ ಪ್ರವಾಹದಲ್ಲಿ ಅನವರತ ತೇಲುತ್ತಿದ್ದಳು. ಶ್ರೀರಂಗನಾಥನೇ ತನ್ನ ಪತಿ ಎಂದು ತೀರ್ಮಾನಿಸಿದಳು.

ತಂದೆಯು ಸಂಗ್ರಹಿಸಿದ ಕುಸುಮಗಳನ್ನು ಮಾಲೆಕಟ್ಟುವ ಕೈಂಕರ್ಯವನ್ನು ಗೋದಾ ಮಾಡುತ್ತಿದ್ದಳು. ಹಾಗೆ ಕಟ್ಟಿದ ಪುಷ್ಪಮಾಲೆಯನ್ನು, ತಾನೇ ಮೊದಲು ಮುಡಿದುಕೊಂಡು, ಕನ್ನಡಿಯಲ್ಲಿ ತನ್ನ ಸೌಂದರ್ಯವನ್ನು ನೋಡಿ ಆನಂದಿಸುವಳು. ಬಳಿಕವೇ ಅದು ದೇವರ ಸನ್ನಿಧಿಗೆ ಬರುತ್ತಿತ್ತು. ಪೆರಿಯಾಳ್ವಾರ್ ಒಂದು ದಿನ ಇದನ್ನು ನೋಡಿಬಿಟ್ಟರು. ದೊಡ್ಡ ಅಪಚಾರ ಎಂದು ಭಾವಿಸಿದರು. ಅಂದು ಅವರು ದೇವಸ್ಥಾನಕ್ಕೆ ಹೋಗಲಿಲ್ಲ. ಗೋದಾಳಿಗೆ ತುಂಬಾ ದುಃಖವಾಯಿತು. ಆ

ಪಾಂಡ್ಯರಾಜನು ಶ್ರೀವಿಲ್ಲಿಪುತ್ತೂರು ಹಾಗೂ ಶ್ರೀರಂಗವನ್ನು ಸೇರಿಸುವ ರಾಜಮಾರ್ಗವನ್ನು ಅಲಂಕರಿಸಿ, ಎಲ್ಲಾ ಏರ್ಪಾಡುಗಳನ್ನೂ ಮಾಡಿದನು. ಪೆರಿಯಾಳ್ವಾರರನ್ನೂ ಕಂಡು ಪರಮಾತ್ಮನು ಹೇಳಿದುದನ್ನು ಅರುಹಿದನು. ಶ್ರೀರಂಗಂ ದೇವಸ್ಥಾನದ ಪರಿವಾರದವರು ಪೆರಿಯಾಳ್ವಾರರಿಗೆ ನಮಸ್ಕರಿಸಿ, ತಮ್ಮ ಕನಸಿನಲ್ಲಿ ಬಂದು, ಶ್ರೀರಂಗನಾಥನು ಹೇಳಿದುದನ್ನು ವಿವರಿಸಿದರು. ಬ್ರಾಹ್ಮಣರು ಹಲವು ಪುಣ್ಯನದಿಗಳ ತೀರ್ಥವನ್ನು ತಂದುಕೊಟ್ಟರು. ಗೋದಾದೇವಿಯ ಗೆಳತಿಯರು ಅವಳನ್ನು ಆ ಪವಿತ್ರತೀರ್ಥದಲ್ಲಿ ಸ್ನಾನಮಾಡಿಸಿ, ಆಭರಣಗಳಿಂದ ಸಿಂಗರಿಸಿದರು. ಗೋದಾ ಮುತ್ತಿನ ಪಲ್ಲಕ್ಕಿಯಲ್ಲಿ ಶ್ರೀರಂಗಕ್ಕೆ ಹೊರಟಳು. ಆಗ ಅಲ್ಲಿದ್ದ ಜನಸ್ತೋಮ ಅವಳಿಗೆ ಜಯಕಾರವನ್ನು ಮಾಡುತ್ತಿತ್ತು.

ಅವರೆಲ್ಲರೂ ಶ್ರೀರಂಗಂ ದೇವಸ್ಥಾನವನ್ನು ಸೇರಿದರು. ಗೋದಾ ಪಲ್ಲಕ್ಕಿಯಿಂದ ಇಳಿದು, ಹಂಸದಂತೆ ಹೆಜ್ಜೆಯನ್ನಿಡುತ್ತ, ಅಲಂಕಾರಮಂಟಪವನ್ನು ಸೇರಿ, ಶ್ರೀರಂಗನಾಥನನ್ನು ನಮಸ್ಕರಿಸಲು ಹತ್ತಿರ ಹೋದವಳು, ಹಾಗೆಯೇ ದೇವರ ಸಮ್ಮುಖದಲ್ಲಿ ಕಣ್ಮರೆಯಾಗಿಬಿಟ್ಟಳು. ಇದನ್ನು ಕಂಡು ಎಲ್ಲರಿಗೂ ಬಹಳ ಆಶ್ಚರ್ಯ. ನಂತರ ಶ್ರೀರಂಗನಾಥನು ಪೆರಿಯಾಳ್ವಾರರಿಗೆ ಅರ್ಚಕರ